ವಿಜಯ ಕರ್ನಾಟಕ

# ಗುತ್ತಿಗೆ ಕಂಪನಿಗಳನ್ನು ಕಪ್ಪುಪಟ್ಟಿಗೆ ಸೇರಿಸಲು ಆಗ್ರಹ

**ವಿಕ ಸುದ್ದಿಲೋಕ** ಬೆಂಗಳೂರು

ನಗರದ ಬಸವೇಶ್ವರವೃತ್ತದಿಂದ ಹೆಬ್ಬಾಳದವರೆಗೆ ನಿರ್ಮಿಸಲು ಉದ್ದೇಶಿಸಿರುವ ಉಕ್ಕಿನ ಸೇತುವೆ ಕಾಮಗಾರಿಯ ಗುತ್ತಿಗೆ ಪಡೆದಿರುವ ಎಲ್ ಆ್ಯಂಡ್ ಟಿ ಸಂಸ್ಥೆ ಸೇರಿ ಮೂರು ಕಂಪನಿಗಳನ್ನು ಕಪ್ಪುಪಟ್ಟಿಗೆ ಸೇರಿಸುವಂತೆ 2009ರಲ್ಲಿ ಜಂಟಿ ಸದನ ಸಮಿತಿ ಶಿಫಾರಸ್ಸು ಮಾಡಿತ್ತು ಎಂದು ನಿವೃತ್ತ ಐಎಎಸ್ ಅಧಿಕಾರಿ ಎಂ.ಎನ್. ವಿಜಯಕುಮಾರ್ ಆರೋಪಿಸಿದ್ದಾರೆ.

''ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಕಾಮಗಾರಿಯಲ್ಲಿ ಪಾರದರ್ಶಕತೆ ಕೊರತೆ ಮತ್ತು ಕಳಪೆ ಕಾಮಗಾರಿ ತನಿಖೆಗೆ ನೇಮಿಸಿದ್ದ ಹೇಮಚಂದ್ರಸಾಗರ್ ನೇತೃತ್ವದ ಜಂಟಿ ಸದನ ಸಮಿತಿ 2009ರಲ್ಲಿ ತನಿಖಾ ವರದಿ ಸಿದ್ದ ಮಾಡಿತ್ತು. ಅದರಲ್ಲಿ ಎಲ್ ಆ್ಯಂಡ್ ಟಿ ಕಂಪನಿ ನಿರ್ಮಿಸಿದ್ದ ರನ್‌ವೇ ಕಳಪೆ ಗುಣಮಟ್ಟದ್ದು ಎಂಬುದು ಬೆಳಕಿಗೆ ಬಂದಿತ್ತು. ಗ್ಯಾರಂಟಿ ಅವಧಿ ಮುಗಿಯುವ ಮೊದಲು 2012ರಲ್ಲಿ ರನ್‌ವೇ ಮೇಲ್ಸ್ತರ ಕಾಮಗಾರಿ ಕೈಗೊಳ್ಳಲಾಗಿತ್ತು. ಕಾಮಗಾರಿ ಗುಣಮಟ್ಟದ ಖಾತರಿಯನ್ನು ಕಂಪನಿ ಈಡೇರಿಸಬೇಕು ಎಂದು ಸೂಚಿಸಲಾಗಿತ್ತು,'' ಎಂದು ಎಂ.ಎನ್. ವಿಜಯಕುಮಾರ್ ಆರೋಪಿಸಿದರು.

''ಜಂಟಿ ಸದನ ಸಮಿತಿ ನೇಮಕಗೊಂಡು ತನಿಖಾ ವರದಿ ಮಂಡಿಸುವ ಕೆಲವು ದಿನಗಳ ಮುಂಚೆ ಎಲ್‌ಆ್ಯಂಡ್‌ಟಿ ಕಂಪನಿ ಬಿಐಎಎಲ್‌ನಲ್ಲಿದ್ದ ಸುಮಾರು 55 ಕೋಟಿ ರೂ.ಗಳ ಶೇ.17ರಷ್ಟು ಪಾಲನ್ನು 680 ಕೋಟಿಗೆ ಮಾರಾಟ ಮಾಡಿ ವಂಚಿಸಿದೆ. ಜತೆಗೆ ಬೆಂಗಳೂರು ವಿಷನ್ ಗ್ರೂಪ್ ಒತ್ತಡದಿಂದ ಎಲ್ ಆ್ಯಂಡ್ ಟಿ ಕಂಪನಿಯನ್ನು ಕಪ್ಪು ಪಟ್ಟಿಗೆ ಸೇರಿಸಲಿಲ್ಲ. ಈ ಅಂಶಗಳನ್ನು ಸರಕಾರ ಉದ್ದೇಶ ಪೂರ್ವಕವಾಗಿ ನಿರ್ಲಕ್ಷಿಸಿ ಉಕ್ಕಿನ ಸೇತುವೆ ಕಾಮಗಾರಿಯನ್ನು ಎಲ್ ಆ್ಯಂಡ್ ಟಿ ಕಂಪನಿ ಹಾಗೂ ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪನಿಗೆ ಗುತ್ತಿಗೆ ನೀಡಿದೆ. ಇದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು.

ವಕೀಲ ಧನಂಜಯ ಮಾತನಾಡಿ ''ಸರಕಾರ ಕಪ್ಪುಪಟ್ಟಿಗೆ ಸೇರಿಸಲ್ಪಟ್ಟ ಕಂಪನಿಗಳಿಗೆ ಗುತ್ತಿಗೆ ನೀಡಿದೆ. ಇದರಿಂದ ಮುಂದೆ ಜನಸಾಮಾನ್ಯರಿಗೆ ತೊಂದರೆಯಾಗಲಿದೆ. ಸರಕಾರ ಕೂಡಲೇ ಎಚ್ಚೆತ್ತುಕೊಳ್ಳಬೇಕು,'' ಎಂದು ಎಚ್ಚರಿಸಿದರು.